98 (205) ಶ್ರೀ ಸಿದ್ದು ಸಾವದಿ (ಜಮಖಂಡಿ): ಮಾನ್ಯ ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಅಲ್ಪಸಂಖ್ಯಾತರ ಅಭಿವೃದ್ಧಿಗಾಗಿ ಇರುವ ಕಾರ್ಯಕ್ರಮಗಳು ಯಾವುವು ;

ಆ) ಈ ಎಲ್ಲಾ ಕಲ್ಯಾಣ ಕಾರ್ಯಕ್ರಮದಡಿ ಜಮಖಂಡಿ ತಾಲ್ಲೂಕಿನಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳೆಷ್ಟು ;

ಇ) ಶಾದಿಮಹಲ್‌ಗಳನ್ನು ಕಟ್ಟಿಸಿಕೊಡಲು ಇರುವ ನಿಯಮಗಳೇನು ;

ಈ) ಕಳೆದ 5 ವರ್ಷಗಳಲ್ಲಿ ಜಮಖಂಡಿ ತಾಲ್ಲೂಕಿನಲ್ಲಿ ಕಟ್ಟಿಸಲಾದ ಶಾದಿಮಹಲ್‌ಗಳ ಸಂಖ್ಯೆ ಎಷ್ಟು ;

ಉ) ಜಮಖಂಡಿ ತಾಲ್ಲೂಕಿನಲ್ಲಿ ಅಲ್ಪಸಂಖ್ಯಾತರು ಹೆಚ್ಚಾಗಿದ್ದು ಇನ್ನೂ 6 ಶಾದಿಮಹಲ್‌ಗಳನ್ನು ನಿರ್ಮಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ ;

ಊ) ಶಾದಿಮಹಲ್‌ನ್ನು 5 ಲಕ್ಷ ರೂಪಾಯಿಗಳಲ್ಲಿ ನಿರ್ಮಿಸಲು ಆಗದ ಕಾರಣ ಯುನಿಟ್ ಕಾಸ್ಟ್ ಅನ್ನು ಹೆಚ್ಚಿಸುವ ಯೋಜನೆ ಇದೆಯೇ ;

ಋ) ಹಾಗಿದ್ದಲ್ಲಿ, ಎಷ್ಟು ರೂ.ಗಳಿಗೆ ಹೆಚ್ಚಿಸಲಾಗುವುದು?

ಶ್ರೀ ಇಕ್ಬಾಲ್ ಅನ್ಸಾರಿ (ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು):

ಅ) **ರಾಜ್ಯವಲಯ ಕಾರ್ಯಕ್ರಮ:**

1. ಶಾದಿಹಲ್/ಸಮುದಾಯ ಭವನಗಳ ನಿರ್ಮಾಣ
2. ಅಲ್ಪಸಂಖ್ಯಾತರಿಗಾಗಿ ಹಾಸ್ಟೆಲ್ ಕಟ್ಟಡಗಳ ನಿರ್ಮಾಣ
3. ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿರ್ಮಾಣ
4. ಅಲ್ಪಸಂಖ್ಯಾತರ ಸಂಸ್ಥೆಗಳಿಂದ ವಿದ್ಯಾರ್ಥಿನಿಲಯ ಕಟ್ಟಡಗಳ ನಿರ್ಮಾಣ.
5. ಅಲ್ಪಸಂಖ್ಯಾತರಿಗಾಗಿ ಪೀಠ
6. ಹೊಸ ಮೊರಾರ್ಜಿ ದೇಸಾಯಿ ನಿವಾಸಿ ಶಾಲೆಗಳು
7. ಅಲ್ಪಸಂಖ್ಯಾತರಿಗಾಗಿ ಕೌಶಲ್ಯ ಅಭಿವೃದ್ಧಿ ಯೋಜನೆ
8. ಸರ್ಕಾರಿ ಅಲ್ಪಸಂಖ್ಯಾತರ ಶಾಲೆಗಳಿಗೆ ಶಿಕ್ಷಣ ಕಲಿಕೆ ಸಾಧನೆಗಳು
9. ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಉತ್ತೇಜನ.

ಜಿಲ್ಲಾವಲಯ ಕಾರ್ಯಕ್ರಮಗಳು:

1. ಅಲ್ಪಸಂಖ್ಯಾತರ ತರಬೇತಿ
2. ಅಲ್ಪಸಂಖ್ಯಾತರ ಹಾಸ್ಟೆಲ್‌ಗಳು
3. ಅಲ್ಪಸಂಖ್ಯಾತರ ಐಟಿಐ/ಡಿಪ್ಲೋಮಾ ವಿದ್ಯಾರ್ಥಿಗಳಿಗೆ ಶಿಷ್ಯವೇತನ.
4. ಅಲ್ಪಸಂಖ್ಯಾತರ ಸಂಸ್ಥೆಗಳಿಂದ ನಡೆಸಲ್ಪಡುತ್ತಿರುವ ವಿದ್ಯಾರ್ಥಿನಿಲಯ.
5. ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು
6. ಅಲ್ಪಸಂಖ್ಯಾತರಿಗಾಗಿ ವೃತ್ತಿ ತರಬೇತಿ
7. ಅಲ್ಪಸಂಖ್ಯಾತರಿಗಾಗಿ ಅನಾಥಾಲಯಗಳು

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಅಲ್ಪಸಂಖಾತರ ಅಭಿವೃದ್ಧಿಗಾಗಿ ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

1. ಸ್ವಾವಲಂಬನ ಸಾಲದ ಯೋಜನೆ
2. ಸಹಾಯಧನ ಯೋಜನೆ
3. ಅರಿವು (ವಿದ್ಯಾಭ್ಯಾಸ ಸಾಲದ) ಯೋಜನೆ
4. ಗಂಗಾ ಕಲ್ಯಾಣ ಯೋಜನೆ
5. ಶ್ರಮಶಕ್ತಿ ಯೋಜನೆ
6. ಭೂ ಖರೀದಿ ಯೋಜನೆ
7. ರಾಷ್ಟ್ರೀಯ ನಿಗಮದ ನೇರ ಸಾಲ ಯೋಜನೆ

ಉ) 1. ಜಮಖಂಡಿ ತಾಲ್ಲೂಕಿನಲ್ಲಿ ಹಳಂಗಳಿ ಹಾಗೂ ತೆರೆದ ಗ್ರಾಮದ ಅಲ್ಪಸಂಖ್ಯಾತರ 02 ಖಾಸಗಿ ಅನುದಾನಿತ ಸಂಸ್ಥೆಯ ವಿದ್ಯಾರ್ಥಿಗಳ ಸಂಖ್ಯೆ:75.

2. ತೆರದಾಳ ಗ್ರಾಮದಲ್ಲಿ ಅಲ್ಪಸಂಖ್ಯಾತರ ಐಟಿಐ/ಡಿಪ್ಲೋಮಾ ತರಬೇತಿಗೆ ಸಂಖ್ಯೆ:1

3. ಜಮಖಂಡಿ ತಾಲ್ಲೂಕಿನ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ (ಉತ್ತೇಜನ) ತರಬೇತಿ ಭತ್ಯೆಗಾಗಿ ಆಯ್ಕೆ ಮಾಡಲಾದ ವಿದ್ಯಾರ್ಥಿಗಳ ಸಂ: 08

4. ಜಮಖಂಡಿ ಟೌನ್ ಹಾಗೂ ತೇರದಾಳ ಗ್ರಾಮದಲ್ಲಿ ಅಲ್ಪಸಂಖ್ಯಾತರ ಶಾದಿಮಹಲ್ ನಿರ್ಮಾಣದ ಸಲುವಾಗಿ ತಲಾ ರೂ. 5.00 ಲಕ್ಷದಂತೆ ಸಹಾಯಧನ ಬಿಡುಗಡೆ ಮಾಡಲಾಗಿದೆ. 02 ಕಟ್ಟಡ ಪೂರ್ಣಗೊಂಡಿದೆ.

ಜಮಖಂಡಿ ತಾಲ್ಲೂಕಿನಲ್ಲಿ 2006–07ನೇ ಸಾಲಿನಲ್ಲಿ ಒದಗಿಸಿರುವ ಸೌಲಭ್ಯಗಳ ವಿವರ ಈ ಕೆಳಕಂಡಂತಿವೆ.

(ರೂ. ಲಕ್ಷಗಳಲ್ಲಿ)

ಕ್ರ. ಸಂ.	ಯೋಜನೆ ಹೆಸರು	ಭೌತಿಕ	ಆರ್ಥಿಕ
1.	ಸ್ವಾವಲಂಬನ, ಸಾಲದ ಯೋಜನೆ	49	5.50
2.	ಸಹಾಯಧನ ಯೋಜನೆ	49	2.45
3.	ಅರಿವು (ವಿದ್ಯಾಭ್ಯಾಸ ಸಾಲದ) ಯೋಜನೆ	11	1.20
4.	ಗಂಗಾ ಕಲ್ಯಾಣ ಯೋಜನೆ	62	31.12
5.	ಶ್ರಮಶಕ್ತಿ ಯೋಜನೆ	–	–

ಇ) 1. ಸಂಸ್ಥೆಯು ನೊಂದಾಯಿತವಾಗಿರಬೇಕು.

2. ಸಂಸ್ಥೆಯು ಸ್ವಂತ ಹೆಸರಿನಲ್ಲಿ ನಿವೇಶನ ಹೊಂದಿರಬೇಕು.

3. ಅಲ್ಪಸಂಖ್ಯಾತರಿಗೆ ಶಾದಿಮಹಲ್ ನಿರ್ಮಾಣಕ್ಕಾಗಿ ಜಿಲ್ಲಾ ಕೇಂದ್ರ ಸ್ಥಾನಗಳಲ್ಲಿ ನಿರ್ಮಾಣವಾದ ಅಂದಾಜಿನ ಮೊತ್ತವು.

4. ಜಿಲ್ಲಾ ಕೇಂದ್ರೇತರ ಸ್ಥಾನಗಳಲ್ಲಿ ಭವನಗಳ ನಿರ್ಮಾಣದ ಅಂದಾಜಿನ ಮೊತ್ತ ರೂ. 20.00 ಲಕ್ಷಗಳಿಗಿಂತ ಕಡಿಮೆ ಇರಬಾರದು.

5. ಕಟ್ಟಡ ನಕಾಶೆ ಮತ್ತು ಅಂದಾಜಿನ ಮೊತ್ತವನ್ನು ನೊಂದಾಯಿತ ಅಭಿಯಂತರರು/ಧೃಢೀಕೃತ ಅಭಿಯಂತರರು/ಅನುಮೋದಿತ ಮೌಲ್ಯ ಮಾಪನಕಾರ ಪರವಾನಿಗೆ ಪಡೆದ ಅಭಿಯಂತರಿಂದ ದೃಢೀಕರಿಸಬೇಕು.

6. ಜಿಲ್ಲಾ ಕೇಂದ್ರಗಳಲ್ಲಿ ಗರಿಷ್ಟ ರೂ. 50.00 ಲಕ್ಷ ಹಾಗೂ ಇತರ ಸ್ಥಳಗಳಲ್ಲಿ ಗರಿಷ್ಟ ರೂ. 20.00 ಲಕ್ಷ ಅನುದಾನವನ್ನು ಶಾದಿಮಹಲ್ ನಿರ್ಮಾಣಕ್ಕೆ ಮಂಜೂರು ಮಾಡಲಾಗುವುದು.

1. ಎರಡು ಅಂದರೆ ಮೆಕ್ಕಾ ಮಸೀದಿ ವೆಂಡಾರ ಮೊಹಲ್ಲಾ ಜಮಖಂಡಿ ಈ ಸಂಸ್ಥೆಯವರಿಗೆ ರೂ. 5.00 ಲಕ್ಷ ಸಹಾಯಧನ ನೀಡಲಾಗಿದೆ.

2. ಪೀಠ ಅಬಾಕಾನ್ ಶಿಕ್ಷಣ ಸಂಸ್ಥೆ ತೇರದಾಳ ಈ ಸಂಸ್ಥೆಯವರಿಗೆ ರೂ. 5.00 ಲಕ್ಷ ಸಹಾಯಧನ ನೀಡಲಾಗಿದೆ.

ಉ) ಅಲ್ಪಸಂಖ್ಯಾತರ ಮುಸ್ಲಿಂ ಜನಾಂಗದ ವತಿಯಿಂದ ಈಗಾಗಲೇ ಎರಡು ಶಾದಿಮಹಲ್ ನಿರ್ಮಾಣಗೊಂಡಿದ್ದು, ಹಾಗೂ ತೇರದಾಳ ಗ್ರಾಮದಲ್ಲಿ ಹೊಸದಾಗಿ ಎರಡು ಶಾದಿಮಹಲ್‌ಗಳ ಪ್ರಸ್ತಾವನೆಗಳು ಬಂದಿದ್ದು, ಸದರಿ ಪ್ರಸ್ತಾವನೆ ಪರಿಶೀಲಿಸಿ, ಜಿಲ್ಲಾಧಿಕಾರಿಗಳ ಶಿಫಾರಸ್ಸಿನೊಂದಿಗೆ ಈ ಕಛೇರಿಯಿಂದ ದಿನಾಂಕ: 28.12.2006ರಂದು ಮಂಜೂರಾತಿಗಾಗಿ ನಿರ್ದೇಶನಾಲಯಕ್ಕೆ ಬಂದಿರುತ್ತದೆ. ಶಾದಿಮಹಲ್ ನಿರ್ಮಾಣಕ್ಕಾಗಿ ಹೆಚ್ಚಿನ ಪ್ರಸ್ತಾವನೆಗಳು ಬಂದಲ್ಲಿ ನಿಮಾನುಸಾರ ಪರಿಶೀಲಿಸಿ ಅನುದಾನ ಮಂಜೂರು ಮಾಡಲಾಗುವುದು.

ಊ) ಸರ್ಕಾರದ ಆದೇಶ ಸಂ: ಸಕಇ 91/ಅಸಂಯೋ 2006, ಬೆಂಗಳೂರು, ದಿನಾಂಕ: 17.07.2006ರ ಆದೇಶದಲ್ಲಿ ಶಾದಿಮಹಲ್/ಸಮುದಯ ಭವನಕ್ಕೆ ನೀಡುವ ಅನುದಾನವನ್ನು ಹೆಚ್ಚಿಸಲಾಗಿದೆ.

ಋ) ಜಿಲ್ಲಾ ಕೇಂದ್ರಗಳಲ್ಲಿ ರೂ. 50.00 ಲಕ್ಷ ಮೀರದಂತೆ ಹಾಗೂ ಇತರೆ ತಾಲ್ಲೂಕುಗಳಲ್ಲಿ ರೂ. 20.00 ಲಕ್ಷ ಮೀರದಂತೆ ಹೆಚ್ಚಿಸಲಾಗಿದೆ.